# ಶ್ರೇಯಾ ಅಂಚನ್

## ಕೇರಾಫ್ ತಮಿಳು ಸೀರಿಯಲ್!

**ಶ್ರೇಯಾ ನಟಿಸಿದ್ದು ಕೆಲವೇ ಸಿನಿಮಾಗಳಲ್ಲಿಯಾದರೂ ಗಮನಸೆಳೆದಂಥ ಪ್ರತಿಭಾವಂತೆ. ಸದ್ಯಕ್ಕೆ ತಮಿಳು ಧಾರಾವಾಹಿಯೊಂದರಲ್ಲಿ ಬ್ಯುಸಿಯಾಗಿರುವ ಅವರಿಗೆ ಒಳ್ಳೆಯ ಪಾತ್ರದ ಮೂಲಕ ಕನ್ನಡ ಬಣ್ಣದ ಲೋಕಕ್ಕೆ ಮರಳುವ ಮನಸು ಮತ್ತು ಇಲ್ಲಿಯೇ ಬೇರೂರಿ ಬೆಳೆಯುವ ಕನಸು ಎರಡೂ ಇದೆ.**

■ **ಪದ್ಮನಾಭ ಭಟ್**

'ಒಂದು ಮೊಟ್ಟೆಯ ಕಥೆ' ಸಿನಿಮಾ ಬಿಡುಗಡೆಯಾದಾಗ ಈ ದುಂಡುಮೊಗದ ಚುಕ್ಕಿ ಚೆಲುವೆಯ ಕುರಿತು ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದ್ದವು. ಆಗ ಶ್ರೇಯಾ ಅವರನ್ನು ಮಾತಾಡಿಸಿದಾಗ ಕನ್ನಡ ಮಾತುಗಳ ಮಧ್ಯೆ ಒಂದೊಂದು ತುಳು ಶಬ್ದಗಳು ಇಣುಕುತ್ತಿದ್ದವು. ಆದರೆ ಈಗ ಇವರನ್ನು ಮಾತಿಗೆಳೆದರೆ ಕನ್ನಡ ಶಬ್ದಗಳ ಮಧ್ಯೆ ತಮಿಳು ಪದಗಳು ನುಸುಳುತ್ತವೆ!

ಇದಕ್ಕೆ ಕಾರಣ ಇಲ್ಲದಿಲ್ಲ. 'ಒಂದು ಮೊಟ್ಟೆಯ ಕಥೆ' ಚಿತ್ರದ ನಂತರ ಶ್ರೇಯಾ ಕಾಣಿಸಿಕೊಂಡಿದ್ದು 'ಸೂಜಿದಾರ' ಚಿತ್ರದಲ್ಲಿ. ಹಾಗಾದರೆ ಶ್ರೇಯಾ ಈಗೇನು ಮಾಡುತ್ತಿದ್ದಾರೆ? ಯಾವ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ? ಈ ಪ್ರಶ್ನೆಗಳಿಗೆ ಅವರು ಉತ್ತರಿಸುವುದು ಚೆನ್ನೈನಲ್ಲಿ ತಮಿಳು ಧಾರಾವಾಹಿಯೊಂದರ ಶೂಟಿಂಗ್ ಸೆಟ್‌ನಿಂದ.

ಹೌದು, ಮಂಗಳೂರಿನ ಈ ಹುಡುಗಿ ಈಗ ತಮಿಳಿನ ಧಾರಾವಾಹಿಯೊಂದರ ನಟನೆಯಲ್ಲಿ ಬ್ಯುಸಿಯಾಗಿದ್ದಾರೆ. ಕನ್ನಡದ 'ಅಗ್ನಿಸಾಕ್ಷಿ' ಧಾರಾವಾಹಿಯ ಎಳೆಯನ್ನು ಇಟ್ಟುಕೊಂಡೇ ರೂಪಿಸಲಾಗಿರುವ 'ತಿರುಮನ್' ಎಂಬ ಧಾರಾವಾಹಿಯಲ್ಲಿ ಅವರು ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ.

'ಮೊದಲು ನಾನು ಮಂಗಳೂರು ಕನ್ನಡದಲ್ಲಿ ಮಾತಾಡ್ತಿದ್ದೆ. ಮಧ್ಯ ಮಧ್ಯ ಒಂದೊಂದು ತುಳು ಶಬ್ದಗಳೂ ಇಣುಕುತ್ತಿದ್ದವು. ಆದರೆ ಈಗ ತಮಿಳು ಧಾರಾವಾಹಿ ಚಿತ್ರೀಕರಣದಲ್ಲಿ ಇಡೀ ದಿನ ತೊಡಗಿಕೊಂಡಿರುತ್ತೇನೆ. ಸುತ್ತಮುತ್ತ ಮಾತಾಡಲಿಕ್ಕೂ ಒಬ್ಬರು ಕನ್ನಡಿಗರು ಸಿಗುವುದಿಲ್ಲ. ಹಾಗಾಗಿ ಕನ್ನಡದಲ್ಲಿ ಮಾತನಾಡಹೊರಟರೂ ತಮಿಳು ಶಬ್ದಗಳು ನುಸುಳಿಬಿಡುತ್ತವೆ. ಹಾಗಂತ ಕನ್ನಡ ಮರೆತಿದ್ದೀನಿ ಅಂತ ಖಂಡಿತ ಅಲ್ಲ. ಕನ್ನಡ ನನ್ನ ಭಾಷೆ. ಯಾರ ಬಳಿಯಾದರೂ ಹತ್ತು ನಿಮಿಷ ಕನ್ನಡ ಮಾತಾಡಿದರೆ ಆ ಭಾಷೆ ಸುರಳೀತವಾಗಿ ಬಂದುಬಿಡುತ್ತದೆ' ಎನ್ನುತ್ತಾರೆ ಶ್ರೇಯಾ.

ಕನ್ನಡ ಸಿನಿಮಾಗಳಲ್ಲಿ ಯಾಕೆ ನಟಿಸುತ್ತಿಲ್ಲ? ಅವಕಾಶಗಳು ಇಲ್ಲವೇ? ಎಂದು ಕೇಳಿದರೆ ಅವರು ಮತ್ತದೇ ಧಾರಾವಾಹಿಯತ್ತ ಬೊಟ್ಟು ಮಾಡುತ್ತಾರೆ. 'ಒಂದು ಮೊಟ್ಟೆಯ ಕಥೆ' ಸಿನಿಮಾದ ನಂತರ ನನಗೆ ಕನ್ನಡದಲ್ಲಿ ಸಾಕಷ್ಟು ಅವಕಾಶಗಳು ಬಂದವು. ಅವುಗಳಲ್ಲಿ ಕೆಲವನ್ನು ಇಷ್ಟಪಟ್ಟು ಒಪ್ಪಿಕೊಳ್ಳಲೂ ಮುಂದಾಗಿದ್ದೆ. ಆದರೆ ಧಾರಾವಾಹಿ ಚಿತ್ರೀಕರಣದ ನಡುವೆ ಡೇಟ್ಸ್ ಹೊಂದಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಕೈಬಿಡಬೇಕಾಯ್ತು' ಎಂದು ವಿವರಣೆ ನೀಡುತ್ತಾರೆ.

ಕನ್ನಡ ಚಿತ್ರಗಳಲ್ಲಿ ನಟಿಸಲು ಸಾಧ್ಯವಾಗದಿರುವುದಕ್ಕೆ ಅವರಿಗೆ ಸಾಕಷ್ಟು ಬೇಸರವೂ ಇದೆ. 'ಕನ್ನಡ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಆಸೆ ನನಗೂ ಇದೆ. ಒಂದು ವರ್ಷದ ಮೇಲಾಯಿತು ನಾನು ಕನ್ನಡ ಸಿನಿಮಾವೊಂದರಲ್ಲಿ ನಟಿಸಿ. ಈಗ ಈ ಧಾರಾವಾಹಿ ಚಿತ್ರೀಕರಣದ ನಡುವೆಯೇ ಬಿಡುವು ಮಾಡಿಕೊಂಡು ನಟಿಸಲು ಯೋಚಿಸಿದ್ದೇನೆ. ಒಳ್ಳೆಯ ಪಾತ್ರ ಸಿಕ್ಕ ಯಾವಾಗ ಕನ್ನಡ ಸಿನಿಮಾದಲ್ಲಿ ನಟಿಸುತ್ತೀನೋ ಎಂದು ಆಸೆಯಿಂದ ಕಾಯುತ್ತಿದ್ದೇನೆ' ಎನ್ನುತ್ತಾರೆ ಶ್ರೇಯಾ.

ಅವರ ಪ್ರಕಾರ ಒಳ್ಳೆಯ ಪಾತ್ರ ಎಂದರೆ ನಟನೆಗೆ ಅವಕಾಶ ಇರುವ, ಸವಾಲುಗಳನ್ನೊಡ್ಡುವಂಥ ಪಾತ್ರಗಳು. ಅದರಲ್ಲಿಯೂ ಮಹಿಳಾಪ್ರಧಾನ ಸಿನಿಮಾಗಳ ಮೇಲೆ ಅವರಿಗೆ ತುಸು ಜಾಸ್ತಿಯೇ ಒಲವಿದೆ. 'ಮಹಿಳಾ ಪ್ರಧಾನ ಸಿನಿಮಾಗಳಲ್ಲಿ ನಟಿಸಬೇಕು ಎಂದು ತುಂಬ ಆಸೆ ಇದೆ. ಆದರೆ ಅದೊಂದೇ ಕಾರಣಕ್ಕೆ ಒಪ್ಪಿಕೊಳ್ಳಲಾರೆ. ಒಳ್ಳೆಯ ಕಥೆ, ಒಳ್ಳೆಯ ಪಾತ್ರವೂ ಸಿಗಬೇಕು' ಎಂದೂ ಅವರು ಸ್ಪಷ್ಟವಾಗಿ ಹೇಳುತ್ತಾರೆ.

ಸದ್ಯಕ್ಕೆ ತಮಿಳು ನೆಲದಲ್ಲಿ ಕಾಲೂರಿ ನಿಂತಿರುವ ಈ ಕರಾವಳಿ ಬೆಡಗಿಗೆ ಕನ್ನಡ ಭಾಷೆಯ ಕಂಪಿನ ಸೆಳೆತ ಸುತ್ತಿ ಸುಳಿದು ಎಳೆಯುತ್ತಿದೆ. ಚಂದನವನದ ವಿಹಾರಕ್ಕೆ ಮರಳಿ ಬರುವ ಒಂದು ಅವಕಾಶಕ್ಕಾಗಿ ಅವರು ತುದಿಗಾಲಿನಲ್ಲಿ ನಿಂತು ಕಾಯುತ್ತಿದ್ದಾರೆ. ■

